ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: ಕಾಂಪ್ : 9: 03-04

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಾವೇರಿ ಭವನ, 7ನೇ ಮಹಡಿ, ಕೆ.ಜಿ. ರಸ್ತೆ,
ಬೆಂಗಳೂರು. ದಿ: 20-01-2004.

<u>ಗಣಕೀಕರಣ</u>
<u>ಸುತ್ತೋಲೆ-7</u>

ವಿಷಯ: ದಸ್ತಾವೇಜನ್ನು ನೋಂದಾಯಿಸಲು ಉಪಯೋಗಿಸುತ್ತಿರುವ ಕಂಪ್ಯೂಟರ್‌ಗಳಲ್ಲಿ Multi-Media, Audio-Video, Games, ಮುಂತಾದವುಗಳನ್ನು ಅಳವಡಿಸಲು ನಿಷೇದ.

* * * * *

ರಾಜ್ಯಾದ್ಯಂತ ದಸ್ತಾವೇಜುಗಳ ನೋಂದಣಿಯನ್ನು ಗಣಕೀಕರಣದ ಮೂಲಕ ಕಾವೇರಿ ಸಾಫ್ಟ್‌ವೇರ್‌ದಲ್ಲಿ ನೋಂದಾಯಿಸಲಾಗುತ್ತಿದೆ. ರಾಜ್ಯದ ಕೆಲವೊಂದು ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಈ ಕೆಲಸಕ್ಕೆ ಮೀಸಲಿಟ್ಟ ಕಂಪ್ಯೂಟರ್‌ಗಳಲ್ಲಿ C-DAC, Pune ಇವರು ನಿರ್ದಿಷ್ಟ ಪಡಿಸಿದ ಸಾಫ್ಟ್‌ವೇರ್ ಅಲ್ಲದೇ Multi-Media, Audio-Video, Games, ಅಳವಡಿಸುವುದು Display Setting ಬದಲಿಸುವುದು ಹಾಗೂ Screen Saver ದಲ್ಲಿ ತಮಗೆ ಇಷ್ಟ ಬಂದ ಫೋಟೋಗಳನ್ನು ಸ್ಕ್ಯಾನ್ ಮಾಡಿ ಹಾಕಿಕೊಳ್ಳುವುದು, ಇತ್ಯಾದಿ ಅನಧಿಕೃತ ಸಾಫ್ಟ್‌ವೇರ್‌ಗಳನ್ನು ಅಳವಡಿಸಿಕೊಂಡು ಈ ಕಂಪ್ಯೂಟರ್‌ಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ವಿಷಯ ನನ್ನ ಗಮನಕ್ಕೆ ಬಂದಿದೆ. ಇಂತಹ ಅನಧಿಕೃತ ಸಾಫ್‌ವೇರ್‌ಗಳನ್ನು ಅಳವಡಿಸುವುದರಿಂದ System slow ಆಗುವುದು, Data corrupt ಆಗುವ ಸಾಧ್ಯತೆ ಹೆಚ್ಚು.

ಇಂಥಹ ಅನಧಿಕೃತ ಸಾಫ್ಟ್‌ವೇರ್‌ಗಳನ್ನು ಅಳವಡಿಸಿಕೊಂಡು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ. ಇಂತಹವುಗಳನ್ನು ಯಾವುದೇ ಕಛೇರಿಯಲ್ಲಿ ಅಳವಡಿಸಿಕೊಂಡಿದ್ದರೆ ಅವುಗಳನ್ನು ತಕ್ಷಣವೇ ಜಾರಿಗೆ ಬರುವಂತೆ ತೆಗೆದು ಹಾಕತಕ್ಕದ್ದು.

ಕೆಲವೊಂದು ಕಡೆ ಕಂಪ್ಯೂಟರ್‌ಗಳಲ್ಲಿ ಸ್ಕ್ಯಾನ್ ಮತ್ತು ಡಾಟಾ ಫೀಡ್ ಕೆಲಸವನ್ನು ಅನಧಿಕೃತ ವ್ಯಕ್ತಿಗಳು ಮಾಡುತ್ತಿರುವುದೂ ಸಹ ನನ್ನ ಗಮನಕ್ಕೆ ಬಂದಿದೆ. ಕಂಪ್ಯೂಟರ್‌ಗಳಲ್ಲಿ ಡಾಟಾ ಫೀಡ್ ಮಾಡುವುದು ಮತ್ತು ಸ್ಕ್ಯಾನ್ ಮಾಡುವುದು ಪ್ರತಿಯೊಂದು ನಿರ್ವಹಣೆಗೆ ಉಪ ನೋಂದಣಾಧಿಕಾರಿಗಳೇ ವೈಯಕ್ತಿಕ ಜವಾಬ್ದಾರರಾಗಿರುತ್ತಾರೆ. ಇಂತಹ ಮಹತ್ವದ ಕೆಲಸವನ್ನು ಅನಧಿಕೃತ ವ್ಯಕ್ತಿಗಳಿಂದ ಮಾಡಿಸಿದರೆ ಅದರಿಂದಾಗುವ ಅನಾಹುತಗಳಿಗೆ ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರಲ್ಲದೆ ಶಿಕ್ಷೆಗೆ ಒಳಪಡುತ್ತಾರೆ. <u>ಇಂಥಹ ಅಹಿತಕರ ಘಟನೆಗೆ ಅವಕಾಶ ಕೊಡಕೂಡದು</u>.

ಡಾಟಾ ಫೀಡ್ ಮತ್ತು ಸ್ಕ್ಯಾನ್ ಮುಂತಾದ ಕೆಲಸಗಳನ್ನು ಸಂಬಂಧಪಟ್ಟ ಸರ್ವಿಸ್ ಒದಗಿಸುವ ಕಂಪನಿಯವರು ನೇಮಿಸಲ್ಪಟ್ಟ ಡಾಟಾ ಆಪರೇಟರ್ಸ್‌ರವರಿಂದ ಮಾತ್ರವೇ ಈ ಕಾರ್ಯ ಜರುಗಿಸತಕ್ಕದ್ದು.

C-DAC ಪುಣೆಯವರ ಸಲಹೆಯಂತೆ, ಸಂಬಂಧಪಟ್ಟ ಕಂಪೆನಿಯವರು ಅಳವಡಿಸಿದ ಸಾಫ್ಟ್‌ವೇರ್ ಬಿಟ್ಟು ಬೇರೆ ಯಾವುದೇ ಸಾಫ್ಟ್‌ವೇರ್ ಅಳವಡಿಸಿಕೊಂಡಿದ್ದಲ್ಲಿ ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳನ್ನು ಶಿಸ್ತು ಕ್ರಮಕ್ಕೆ ಅಳವಡಿಸಲಾಗುವುದು.

( ಲುಕೋಸ್ ವಲ್ಲತರೈ )
ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
20/1/2004.

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಯವರಿಗೆ.
2. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಯವರಿಗೆ
3. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ
4. ಗಾರ್ಡ್ ಫೈಲ್.
5. ಕಛೇರಿ ಕಡತಕ್ಕೆ.